ಲೈಂಗಿಕ ದೌರ್ಜನ್ಯ ಪ್ರಕರಣಗಳು

68 (138); ಶ್ರೀ ಜಗದೀಶ್ ಕುಮಾರ್ (ಹೆಬ್ಬಾಳ)

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ನಡೆದ ಲೈಂಗಿಕ ದೌರ್ಜನ್ಯದ ಪ್ರಕರಣಗಳೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಇಂದಿನ ಸ್ಥಿತಿಗತಿಗಳೇನು;

ಇ) ಲೈಂಗಿಕ ದೌರ್ಜನ್ಯ ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು)

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ವರದಿಯಾದ ಲೈಂಗಿಕ ದೌರ್ಜನ್ಯ ಪ್ರಕರಣಗಳು ಈ ಕೆಳಕಂಡಂತಿದೆ.

ವರ್ಷ	ಲೈಂಗಿಕ ದೌರ್ಜನ್ಯ ಪ್ರಕರಣಗಳು
2012	2978
2013	3913
2014	5251

ಜಿಲ್ಲಾವಾರು ಅಂಕಿಅಂಶಗಳನ್ನು ಅನುಬಂಧದಲ್ಲಿ ನಮೂದಿಸಿದೆ.

ಆ) ವರದಿಯಾದ ಎಲ್ಲಾ ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ಆರೋಪಿಗಳ ವಿರುದ್ಧ ಪ್ರಕರಣ ದಾಖಲು ಮಾಡಿ, ಕಾನೂನು ರೀತ್ಯಾ ಕ್ರಮ ಕೈಗೊಂಡು, ಆರೋಪಿಗಳನ್ನು ಬಂಧಿಸಿ, ಆರೋಪಿಗಳ ವಿರುದ್ಧ ಸಂಬಂಧಿಸಿದ ನ್ಯಾಯಾಲಯಗಳಲ್ಲಿ ದೋಷಾರೋಪಣಾ ಪತ್ರ ಸಲ್ಲಿಸಲಾಗುತ್ತಿದೆ.

ಇ) **ಲೈಂಗಿಕ ದೌರ್ಜನ್ಯ ಪ್ರಕರಣಗಳನ್ನು ತಡೆಗಟ್ಟಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.**

- ಇತ್ತೀಚಿನ ದಿನಗಳಲ್ಲಿ ಮಹಿಳೆಯ ಮತ್ತು ಮಕ್ಕಳ ಮೇಲಿನ ಅತ್ಯಾಚಾರ ಮತ್ತು ದೌರ್ಜನ್ಯ ಪ್ರಕರಣಗಳು ವರದಿಯಾಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಪೊಲೀಸ್ ಇಲಾಖೆಯು, ಇದನ್ನು ತಡೆಗಟ್ಟಲು, 2014 ರ ಡಿಸೆಂಬರ್ ಮಾಹೆಯನ್ನು **ಅಪರಾಧ ತಡೆ ಮಾಸವನ್ನಾಗಿ** ಆಚರಿಸುತ್ತಿದೆ. ಇದರ ಅಂಗವಾಗಿ, ಡಿಸೆಂಬರ್ ತಿಂಗಳ ಪರ್ಯಂತ ಪ್ರತಿ ಪೊಲೀಸ್ ಠಾಣಾ ಹಂತದಲ್ಲಿ ಹೊಸ ಹೊಸ ಯೋಜನೆಗಳು & ಕಾರ್ಯಕ್ರಮಗಳನ್ನು ಏರ್ಪಡಿಸಿ, ಲಭ್ಯವಿರುವ ಎಲ್ಲಾ ತರಹದ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರ ಮಾಡಿ, ಈ ಕಾರ್ಯಕ್ರಮಗಳಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸಿ, ಅವರುಗಳಿಗೆ ಅರಿವು ಮೂಡಿಸಲು ಸೂಚಿಸಲಾಗಿದೆ.
- **"ಅಪರಾಧ ತಡೆ ಮಾಸದ"** ಉದ್ದೇಶದ ಬಗ್ಗೆ ಮಾದ್ಯಮಗಳ, ಸಾಮಾಜಿಕ ತಾಣಗಳು, ಅಂತರಜಾಲ, ಯುಟ್ಯೂಬ್, ಎಸ್.ಎಂ.ಎಸ್./ಎಂಎಂಎಸ್, ವಾಟ್ಸ್‌ಆಪ್‌ಗಳಲ್ಲಿ ವ್ಯಾಪಕ ಪ್ರಚಾರ ಮಾಡಿ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಸೂಚಿಸಲಾಗಿದೆ.
- ಸಾರ್ವಜನಿಕ ಸ್ಥಳಗಳಲ್ಲಿ ಕರಪತ್ರ ಭಿತ್ತಿಪತ್ರ, ಬ್ಯಾನರ್ಸ್, ಪೊಸ್ಟರ್ಸ್‌ಗಳ ಹಾಗೂ ಸಣ್ಣ ನಾಟಕಗಳು, ಚಿತ್ರಕಲೆಯ ಸ್ಪರ್ಧೆ ಏರ್ಪಡಿಸುವುದು, ಸಾರ್ವಜನಿಕ ಸ್ಥಳಗಳಲ್ಲಿ ಪ್ರಕಟಿಸಿ, ಎಚ್ಚರ ವಹಿಸುವಂತೆ ಮತ್ತು ಪೊಲೀಸರಿಗೆ ಮಾಹಿತಿ ಒದಗಿಸುವಂತೆ ಜಾಹೀರಾತು ಫಲಕಗಳನ್ನು ಪ್ರದರ್ಶಿಸಿ, ವ್ಯಾಪಕ ಜನ ಜಾಗೃತಿ ಕಾರ್ಯಕ್ರಮಗಳನ್ನು ಏರ್ಪಡಿಸಿ ಅರಿವು ಮೂಡಿಸಲು ಸೂಚಿಸಲಾಗಿದೆ.

- ಇತ್ತೀಚೆಗೆ ಭಾರತ ಸರ್ಕಾರವು ಹಾಲಿ ಇರುವ ಹಾಗೂ ಹೊಸದಾಗಿ ಜಾರಿಗೆ ತಂದಿರುವ ಪೋಕ್ಸೋ, ಗೂಂಡಾ ಕಾಯ್ದೆ, ಸಂತ್ರಸ್ತರ ಪರಿಹಾರ ನಿಧಿ, ಇತರ ಕಾಯ್ದೆಗಳ ತಿದ್ದುಪಡಿಗಳ ಕುರಿತು ಸಿಬ್ಬಂದಿ/ಅಧಿಕಾರಿಗಳಿಗೆ ಕಾರ್ಯಗಾರಗಳನ್ನು ಆಯೋಜಿಸುವ ಮೂಲಕ ತರಬೇತಿಯನ್ನು ನೀಡಲು ಹಾಗೂ ಇವುಗಳ ಅನುಷ್ಠಾನದ ಬಗ್ಗೆ ಅಗತ್ಯ ಸೂಚನೆಗಳನ್ನು ನೀಡಲು ಸೂಚಿಸಿದೆ.
- ದೂರುದಾರುಗಳಿಗೆ/ ಸಂತ್ರಸ್ತರುಗಳಿಗಾಗಿ ಪ್ರತಿ ಪೊಲೀಸ್ ಠಾಣೆಗಳಲ್ಲಿ ಅಧಿಕಾರಿಗಳನ್ನು ಸಂಪರ್ಕಿಸಲು ಅವರುಗಳ ದೂರವಾಣಿ ಸಂಖ್ಯೆಗಳುಳ್ಳ ಫಲಕಗಳನ್ನು ಹಾಕುವುದು.
- ಸರ್ಕಾರದ ಆದೇಶ ಸಂಖ್ಯೆ: ಒಇ 160 ಸಿಐಡಿ 2014, ದಿನಾಂಕ: 30/7/2014 ರಲ್ಲಿ ಅತ್ಯಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ, ಕಾನೂನಿಗೆ ತಿದ್ದುಪಡಿ ಹಾಗೂ ಶಿಕ್ಷೆ ಪ್ರಮಾಣ ಹೆಚ್ಚಿಸುವ ಬಗ್ಗೆ ಅಧ್ಯಾಯನ ನಡೆಸಿ, ಶಿಫಾರಸ್ಸು ಮಾಡುವ ಸಂಬಂಧ ಶ್ರೀ ಎಂ.ಸಿ. ನಾಣಯ್ಯ ರವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿಯನ್ನು ರಚಿಸಲಾಗಿದೆ.
- ಮಹಿಳೆಯ ಮತ್ತು ಮಕ್ಕಳ ಮೇಲಿನ ದೌರ್ಜನ್ಯಗಳಿಗೆ ಸಂಬಂಧಿಸಿದಂತೆ, ಘನ ಸರ್ವೋಚ್ಚ/ಉಚ್ಚ ನ್ಯಾಯಾಲಯಗಳು ಆಗ್ಗಿಂದಾಗ್ಗೆ ಹೊರಡಿಸಲಾಗುವ ಆದೇಶಗಳು/ಮಾರ್ಗಸೂಚಿಗಳನ್ನು ಸುತ್ತೋಲೆಗಳ ಮೂಲಕ ರಾಜ್ಯದ ಎಲ್ಲಾ ಘಟಕಾಧಿಕಾರಿಗಳಿಗೆ ಕಳುಹಿಸಿ, ಅದನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಲಾಗುತ್ತಿದೆ.
- ಠಾಣಾಮಟ್ಟದಲ್ಲಿ ಮಹಿಳೆಯರ ಮತ್ತು ಮಕ್ಕಳ ಸಹಾಯ ಕೇಂದ್ರಗಳನ್ನು ಸ್ಥಾಪಿಸಿ, ಎಎಸ್‌ಐ/ಪಿಎಸ್‌ಐ ಅಧಿಕಾರಿಗಳನ್ನು ಮಕ್ಕಳ ಕಲ್ಯಾಣ ಅಧಿಕಾರಿಗಳನ್ನು ನೇಮಿಸಲಾಗಿದೆ ಹಾಗೂ

ತಾಲ್ಲೂಕು/ಜಿಲ್ಲಾ ಮಟ್ಟದಲ್ಲಿ ಮಹಿಳೆಯ ಮತ್ತು ಮಕ್ಕಳ ಕುಂದುಕೊರತೆ/ಸಾಂತ್ವನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

- ಸರ್ಕಾರೇತರ ಸಂಸ್ಥೆಗಳ (ಎನ್‌ಜಿಓ) ಸಹಕಾರದೊಂದಿಗೆ ಮಕ್ಕಳಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.
- ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ವಿಶೇಷ ಕಾನೂನು ಮತ್ತು ವಿಚಾರಣೆಗಾಗಿ ವಿಶೇಷ ನ್ಯಾಯಾಲಯದ ವ್ಯವಸ್ಥೆ ಇದ್ದು, ಮಕ್ಕಳ ರಕ್ಷಣೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
- ಮಹಿಳೆಯ ಮತ್ತು ಮಕ್ಕಳ ಅಕ್ರಮ ಸಾಗಣಿಕೆಯನ್ನು ತಡೆಗಟ್ಟಲು, ಕೇಂದ್ರ ಸರ್ಕಾರದ ಸೂಚನೆಯ ಮೇರೆಗೆ ರಾಜ್ಯ ಸಿಐಡಿ ಘಟಕದಲ್ಲಿ ಆಂಟಿ ಹ್ಯೂಮನ್ ಟ್ರಾಫಿಕಿಂಗ್ ಸೆಲ್ ಅನ್ನು ಸ್ಥಾಪಿಸಲಾಗಿದ್ದು, ಎಡಿಜಿಪಿ ಮಟ್ಟದ ಅಧಿಕಾರಿಯೊಬ್ಬರನ್ನು, ರಾಜ್ಯ ಮಟ್ಟದ ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿರುತ್ತದೆ. ಇವರ ಅಧೀನದಲ್ಲಿ ಕಾರ್ಯನಿರ್ವಹಿಸಲು ಠಾಣಾ ಮಟ್ಟದಿಂದ ಜಿಲ್ಲಾ ಮಟ್ಟದವರೆಗೆ ನೋಡಲ್ ಅಧಿಕಾರಿಗಳನ್ನು ನೇಮಿಸಿ, ಅವರಿಗೆ ಸೂಕ್ತ ತರಬೇತಿ ನೀಡಲಾಗಿದೆ. ಹಾಲಿ ರಾಜ್ಯದಲ್ಲಿ 9 ಎಹೆಚ್‌ಟಿಯು ಘಟಕಗಳು ಕಾರ್ಯನಿರ್ವಹಿಸುತ್ತಿದೆ.
- ಜುವೆನೈಲ್ ಜಸ್ಟೀಸ್ ಕಾಯ್ದೆ ಅನ್ವಯ ಹಾಗೂ ಕೇಂದ್ರ ಸರ್ಕಾರದ ಆದೇಶದ ಮೇರೆಗೆ ರಾಜ್ಯದಲ್ಲಿ ಮಕ್ಕಳ ವಿಶೇಷ ಪೊಲೀಸ್ ಘಟಕಗಳನ್ನು ಸ್ಥಾಪಿಸಲಾಗಿದೆ. ಡಿಜಿಪಿ, ತರಬೇತಿ ರವರನ್ನು ರಾಜ್ಯ ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ.
- ನಗರ/ಜಿಲ್ಲಾಗಳಲ್ಲಿ ಸಹ ಎಸ್‌ಜೆಪಿಯು ಘಟಕವನ್ನು ಸ್ಥಾಪಿಸಿ, ಹಿರಿಯ ಮಕ್ಕಳ ಕಲ್ಯಾಣಾಧಿಕಾರಿಗಳನ್ನು ನೇಮಿಸಿ, ಸರ್ಕಾರವು

ಸಂಖ್ಯೆ: ಹೆಚ್‌ಡಿ 393 ಪಿಸಿಸಿ 2011 ರಂತೆ ಆದೇಶ ಹೊರಡಿಸಿರುತ್ತದೆ. ಮಕ್ಕಳ ಮೇಲಿನ ಲೈಂಗಿಕ ಕಿರುಕುಳ ಪ್ರಕರಣಗಳನ್ನು ತಡೆಗಟ್ಟಲು Protection of Children from Sexual Offences, 2012 ಕಾಯ್ದೆ ಜಾರಿಗೆ ಬಂದಿದ್ದು, ಸದರಿ ಕಾಯ್ದೆ ಅನ್ವಯ ಕ್ರಮ ಜರುಗಿಸಲಾಗುತ್ತಿದೆ.

- ಅತ್ಯಾಚಾರ ಪ್ರಕರಣಗಳಲ್ಲಿ ಶಿಕ್ಷೆ ಪ್ರಮಾಣವನ್ನು 10 ವರ್ಷಗಳಿಂದ ಜೀವಾವಧಿ ಶಿಕ್ಷೆ ವರೆಗೆ ಹೆಚ್ಚಿಸಲಾಗಿದೆ.
- ಅತ್ಯಾಚಾರ ಪ್ರಕರಣಗಳನ್ನು ಬಹಳ ಗಂಭೀರವಾಗಿ ಪರಿಗಣಿಸಿರುವ ಸರ್ಕಾರ, ಇವುಗಳನ್ನು ತಡೆಗಟ್ಟುವ ಸಲುವಾಗಿ ಆರೋಪಿಗಳ ವಿರುದ್ಧ ಗೂಂಡಾ ಕಾಯ್ದೆ ಅಳವಡಿಸಿ, ಕ್ರಮ ಜರುಗಿಸಲು ಪರಿಶೀಲನೆ ನಡೆಸಲಾಗುತ್ತಿದೆ.
- ಪ್ರತಿ ತಿಂಗಳ 2ನೇ ಶನಿವಾರ/ಭಾನುವಾರಗಳಂದು ಎಲ್ಲಾ ಶೈಕ್ಷಣಿಕ ಸಂಸ್ಥೆಗಳ, ಶಾಲಾ ಕಾಲೇಜುಗಳ, ಮುಖ್ಯಸ್ಥರಿಗೆ ಭೇಟಿ ಮಾಡಿ ವಿದ್ಯಾರ್ಥಿನಿಯರಿಗೆ ಕಿರುಕುಳ, ಅತ್ಯಾಚಾರದಂತಹ ಘಟನೆಗಳ ಬಗ್ಗೆ ಜಾಗೃತಿ ಮೂಡಿಸುವ ಕುರಿತು ಆಗಾಗ ಸಭೆಗಳನ್ನು ಆಯೋಜಿಸುವಂತೆ ಸೂಚಿಸಲಾಗಿದೆ ಮತ್ತು ಗ್ರಾಮ ಸಭೆಗಳು, ಸಾರ್ವಜನಿಕ ಸಭೆಗಳಲ್ಲಿಯೂ ಸಹ ಈ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ.
- ವಿದ್ಯಾರ್ಥಿನಿಯರು ಇರುವ ಹಾಸ್ಟೆಲ್/ಶಾಲಾ–ಕಾಲೇಜುಗಳ ಬಳಿ ಹಾಗೂ ಜನವಸತಿ ಪ್ರದೇಶಗಳಲ್ಲಿ ವಿಶೇಷ ಗಸ್ತು ನೇಮಿಸಿ ಮಹಿಳಾ ಸಿಬ್ಬಂದಿಯಿಂದ ಮೇಲಿಂದ ಮೇಲೆ ಭೇಟಿ ಕೊಡುವಂತೆ ನೋಡಿಕೊಳ್ಳಲಾಗಿದೆ. ಈ ಸ್ಥಳಗಳಲ್ಲಿ ಪಾಯಿಂಟ್ ಪುಸ್ತಕಗಳನ್ನು ಇರಿಸಿದ್ದು, ಗಸ್ತು ನಡೆಸುವ ಮೇಲಾಧಿಕಾರಿಗಳು ಇವುಗಳನ್ನು ಪರಿಶೀಲಿಸುತ್ತಾರೆ. ಮಹಿಳಾ ಮತ್ತು ಮಕ್ಕಳ ಸುರಕ್ಷತೆಗಾಗಿ ವಿಶೇಷವಾಗಿ ಅಭಯ ಗಸ್ತು ವಾಹನ ಪ್ರಾರಂಭಿಸಲಾಗಿದೆ.

- ಸರ್ಕಾರದ ಆದೇಶದ ಸಂಖ್ಯೆ : ಮಮಇ/70/ಮಮಅ/2014 ದಿ.12/6/2014 ರಲ್ಲಿ, ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಒಂದೇ ಸೂರಿನಡಿ ಸಮಗ್ರ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ರಾಜ್ಯದ ಎಲ್ಲಾ 30 ಜಿಲ್ಲಾ ಆಸ್ಪತ್ರೆಗಳಲ್ಲಿ ಹಾಗೂ ಬೆಂಗಳೂರು ನಗರದ ಬೌರಿಂಗ್ ಆಸ್ಪತ್ರೆ, ಕೆಸಿ ಜನರಲ್ ಆಸ್ಪತ್ರೆ, ವೈದ್ಯಕೀಯ ಮಹಾವಿದ್ಯಾಲಯ, ನಿಮ್ಹಾನ್ಸ್ ಮತ್ತು ಜಯದೇವ ಹೃದ್ರೋಗ ಆಸ್ಪತ್ರೆಗಳಲ್ಲಿ **"ಮಹಿಳಾ ವಿಶೇಷ ಚಿಕಿತ್ಸಾ ಘಟಕ"** ಗಳನ್ನು ಸ್ಥಾಪಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ಸದರಿ ಆದೇಶವನ್ನು ಅನುಷ್ಠಾನಗೊಳಿಸಲು ಇಲಾಖಾ ವತಿಯಿಂದ ಸಹಕಾರವನ್ನು ನೀಡಲಾಗುವುದು.
- ಅತ್ಯಾಚಾರಕ್ಕಾಗಿ ಒಳಗಾಗಿ ನೊಂದವರಿಗೆ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ. 1 ಪಿಸಿಬಿ 2011, ದಿನಾಂಕ 19–9–2013 ರಲ್ಲಿ ಇರುವಂತೆ ಪರಿಹಾರ ಧನ ವಿತರಿಸಲಾಗುತ್ತಿದ್ದು, ಸದರಿ ಪರಿಹಾರ ಮೊತ್ತವನ್ನು 3 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿದೆ. ಕಮ್ಯುನಿಟಿ ಪೊಲೀಸಿಂಗ್ ಮೂಲಕ **ಜನಸಂಪರ್ಕ** ಮತ್ತು **ಜನಸ್ನೇಹಿ** ಸಭೆಗಳನ್ನು ನಡೆಸಲಾಗುತ್ತಿದೆ.
- **"ತೆರೆದ ಮನೆ"** ಅಭಿಯಾನದ ಮೂಲಕ ಶಾಲಾ ಬಾಲಕ–ಬಾಲಕಿಯರನ್ನು ಠಾಣೆಗೆ ಕರೆಯಿಸಿ, ಅವರು ವಹಿಸಬೇಕಾದ ಜಾಗರೂಕತೆ ಬಗ್ಗೆ ತಿಳುವಳಿಕೆ ನೀಡಲಾಗುತ್ತಿದೆ.
- ಸೆಮಿನಾರ್/ವರ್ಕ್‌ಶಾಪ್ ನಡೆಸುವ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗುತ್ತಿದೆ.
- ಶಾಲಾ ಶಿಕ್ಷಕರು, ಪ್ರಾಂಶುಪಾಲರು, ಪೋಷಕರು, ಸಾಮಾಜಿಕ ಕಾರ್ಯಕರ್ತರು, ಐಟಿ ಕಂಪನಿ – ಬಟ್ಟೆ ಫ್ಯಾಕ್ಟರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳಾ ಕಾರ್ಮಿಕರು, ಇನ್ನಿತರೆ ಪ್ರಮುಖರುಗಳನ್ನು ಒಳಗೊಂಡ "ಸಿಟಿಜನ್ ಕಮಿಟಿ" ಯನ್ನು

ಪ್ರಾರಂಭಿಸಿ, ಸಾರ್ವಜನಿಕರಲ್ಲಿ ತಿಳುವಳಿಕೆ ನೀಡುವ ಕಾರ್ಯ ಪ್ರಾರಂಭಿಸಲಾಗಿದೆ.

- ಶಾಲಾ ಶಿಕ್ಷಕರು ಹಾಗೂ ಶಾಲಾ ಬಾಲಕರನ್ನೊಳಗೊಂಡ **"ಪೊಲೀಸ್ ಕೆಡೆಟ್ ಕಾಪ್ಸ್"**ನ್ನು ಪ್ರಾರಂಭಿಸಿದ್ದು, ಶಾಲೆಯಲ್ಲಿ ನಡೆಯುವ ದೌರ್ಜನ್ಯವನ್ನು ಹೇಗೆ ತಡೆಗಟ್ಟಬೇಕೆಂಬ ಬಗ್ಗೆ ತರಬೇತಿ ನೀಡಲಾಗುತ್ತಿದೆ.
- ಮಹಿಳೆಯರ ಸುರಕ್ಷತೆಯ ಬಗ್ಗೆ ಹೆಚ್ಚಿನ ಆದ್ಯತೆ ಕೊಟ್ಟು ಮಹಿಳಾ ಸಹಾಯವಾಣಿ ಕೇಂದ್ರ **"ಸ್ಪಂದನ"**ವನ್ನು ಬೆಂಗಳೂರು ನಗರದ ಮಲ್ಲೇಶ್ವರಂ ಮತ್ತು ಬಸವನಗುಡಿಯಲ್ಲಿ ತೆರೆಯಲಾಗಿದೆ.
- ಕಷ್ಟದಲ್ಲಿರುವ ಮಹಿಳೆಯರ ಮತ್ತು ಮಕ್ಕಳ ಸಹಾಯಕ್ಕಾಗಿ **ಮಹಿಳಾ ಸಹಾಯವಾಣಿ ಸಂಖ್ಯೆ: 1091 ಮತ್ತು 22943225 ಹಾಗೂ ಮಕ್ಕಳ ಸಹಾಯವಾಣಿ ಸಂಖ್ಯೆ 1098 ಮತ್ತು 22943224, ಹಿರಿಯರ ಸಹಾಯವಾಣಿ ಸಂಖ್ಯೆ: 1090 ಮತ್ತು 22943226** ನ್ನು ಸರ್ಕಾರದ ಸಹಕಾರದೊಂದಿಗೆ ಪ್ರಾರಂಭಿಸಲಾಗಿದೆ.
- ಕಮ್ಯುನಿಟಿ ಪೊಲೀಸಿಂಗ್ ಮೂಲಕ ಜನಸಂಪರ್ಕ ಮತ್ತು ಜನಸ್ನೇಹಿ ಸಭೆಗಳನ್ನು ನಡೆಸಲಾಗುತ್ತಿದೆ.

ANNEXURE				
SL.No.	UNITS	2012	2013	2014
1	BENGALURU CITY	321	378	96
2	MYSURU CITY	22	11	678
3	HUBBALI-DHARWADA CITY	16	37	135
4	BANGULURU DIST	70	130	318
5	KOLARA	37	25	121
6	KGF	10	13	82
7	TUMKURU	171	206	92
8	MYSURU DIST.	163	69	106
9	MANDYA	149	221	172
10	HASSANA	120	182	241
11	KODAGU	25	40	70
12	D.K	35	72	211
13	U.K	97	155	32
14	CHIKKAMAGALURU	70	141	31
15	BELAGAVI	205	246	251
16	DHARAWADA	38	34	94

17	VIJAYAPURA	41	94	31
18	KALABURAGI	132	125	21
19	RAYACHURU	141	156	148
20	BIDAR	40	82	9
21	CHITRADURGA	140	178	60
22	SHIVAMOGGA	158	267	67
23	BALLARI	48	99	34
24	RAILWAYS	2	3	278
25	BAGALAKOTE	63	86	71
26	CHAMARAJANAGARA	64	95	87
27	UDUPI	41	67	201
28	KOPPALA	17	39	198
29	GADAGA	59	40	131
30	HAVERI	72	80	403
31	DAVANAGERE	117	167	242
32	CHIKKABALLAPURA	56	57	111
33	RAMANAGARA	112	141	154
34	YADAGIRI	97	123	127
35	MANGALURU CITY	29	54	148
	TOTAL	2978	3913	5251